**ಕರ್ನಾಟಕ ಸರ್ಕಾರ** **ಸಿ ಆರ್ ಪಿ ಸಿ 67**

**ಹೇಳಿಕೆ ಹಾಳೆ**

**(ಆರ್.ಪಿ.ಸಂಖ್ಯೆ 57)**

**ನಮೂನೆ ಸಂಖ್ಯೆ 4**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ. ಸಂಖ್ಯೆಃ 532/2023 CW-1 PW- 1**

| | |
|---|---|
| **ಹೆಸರು** | **ಯಮನೂರ ತಳವಾರ** |
| **ತಂದೆಯ ಹೆಸರು** | **ಕನಕಪ್ಪ ತಳವಾರ** |
| **ವಯಸ್ಸು** | **35 ವರ್ಷ** |
| **ಉದ್ಯೋಗ** | **ಅಬಕಾರಿ ನಿರೀಕ್ಷಕರು** |
| **ವಾಸ ಸ್ಥಳ** | **ಬೀದರ್** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ12-01-2025**

**ಮುಖ್ಯ ವಿಚಾರಣೆಃ ಸ ಸ ಅ ಅವರಿಂದ**

**ನಾನು ದಿನಾಂಕ: 23-03-2020 ರಿಂದ 20-12-2023 ರವರೆಗೆ ಸಿಂಧನೂರು ಅಬಕಾರಿ ಪೋಲೀಸ್ ಠಾಣೆಯಲ್ಲಿ ಉಪನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ: 28-11-2022 ರಂದು ಸಂಜೆ 4.30 ರ ಸುಮಾರಿಗೆ ಸಿಂಧನೂರು ತಾಲೂಕಿನ ಶ್ರೀಪುರಂಜಂಕ್ಷನ್ ಬಳಿ ರಸ್ತೆ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ಬಾತ್ಮಿ ಬಂದಿದ್ದೇನೆಂದರೆ, ಬೂದಿಹಾಳ ಕ್ಯಾಂಪ್ ಕಡೆಯಿಂದ ಒಂದು ಟಿವಿಎಸ್ ಎಕ್ಸೆಲ್ ದ್ವಿಚಕ್ರ ವಾಹನದ ಮೇಲೆ ಒಬ್ಬ ವ್ಯಕ್ತಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆಂದು ಬಾತ್ಮಿ ಬಂದಿದ್ದು, ಶ್ರೀಪುರಂಜಂಕ್ಷನ್ ಬಳಿ ಇದ್ದ ಚಾ.ಸಾ. 2 ಮತ್ತು 3 ರನ್ನು ಪರಿಚಯಿಸಿಕೊಂಡು ಬಾತ್ಮಿ ವಿಷಯ ತಿಳಿಸಿ ಗುನ್ನೆ ಪತ್ತೆಯಾದರೆ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡೆವು, ಅವರು ಒಪ್ಪಿದ್ದರಿಂದ ನಾನು, ನಮ್ಮ ಸಿಬ್ಬಂದಿ ಚಾ.ಸಾ. 4, ಚಾ.ಸಾ. 2 ಮತ್ತು 3 ಕೂಡಿ ಗಸ್ತು ಕರ್ತವ್ಯ ನಿರ್ವಹಿಸುತ್ತಾ, ಸಾಸಲಮರಿಕ್ಯಾಂಪ್ ಹತ್ತಿರ ಇದ್ದಾಗ ಸಂಜೆ 5.00 ರ ಸುಮಾರಿಗೆ ಬೂದಿಹಾಳ ಕ್ಯಾಂಪ್ ಕಡೆಯಿಂದ ಒಬ್ಬ ವ್ಯಕ್ತಿ ಟಿವಿಎಸ್ ಎಕ್ಸೆಲ್ ದ್ವಿಚಕ್ರ ವಾಹನದ ಮೇಲೆ ಒಂದು ರಟ್ಟಿನ ಬಾಕ್ಸ್ ಇಟ್ಟುಕೊಂಡು ಬರುತ್ತಿದ್ದ, ಅನುಮಾನಗೊಂಡ ನಾವು ಆತನ ವಾಹನವನ್ನು ಕೈಸನ್ನೆ ಮಾಡಿ ನಿಲ್ಲಿಸಲು ಪ್ರಯತ್ನಿಸಿದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ವಾಹನವನ್ನು ಮತ್ತು ಮುದ್ದೆಮಾಲನ್ನು ಸ್ವಲ್ಪ ದೂರದಲ್ಲಿ ಬಿಟ್ಟು ಓಡಿ ಹೋದ. ಸಿಬ್ಬಂದಿಯವರ ಸಹಾಯದಿಂದ ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದರೂ ಸಿಗಲಿಲ್ಲ. ನಂತರ ಸದರಿ

ವ್ಯಕ್ತಿ ಬಿಟ್ಟು ಹೋದ ವಾಹನ ಮತ್ತು ಮುದ್ದೆಮಾಲನ್ನು ಶೋಧನೆ ಮಾಡಲು ನ್ಯಾಯಾಲಯದ ವಾರೆಂಟ್ ಪಡೆಯಲು ಸಮಯಾವಕಾಶದ ಅಭಾವ ಇದ್ದ ಕಾರಣ ಪಂಚರ ಸಮಕ್ಷಮ ಸ್ಥಳದಲ್ಲಿಯೇ ಶೋಧನಾ ಸಮುಚ್ಛಿತ ಆಧಾರ ಪತ್ರ ತಯಾರಿಸಿ ಮುದ್ದೆಮಾಲನ್ನು ಪರೀಕ್ಷಿಸಿದಾಗ ಅದರಲ್ಲಿ ಓ.ಸಿ. ವಿಸ್ಕಿಯ 90 ಎಂ.ಎಲ್. ಅಳತೆಯ 96 ಟೆಟ್ರಾಪ್ಯಾಕ್‌ಗಳು, ಕೆ.ಎಫ್. ಸ್ಟ್ರಾಂಗ್ ಕಂಪನಿಯ 330 ಮೀ. 2 ಬಾಕ್ಸ್‌ಗಳು 48 ಟಿನ್‌ಗಳು ಇದ್ದವು. ಸದರಿ ವಾಹನವನ್ನು ಪರೀಕ್ಷಿಸಿದಾಗ ಅದು ಹಸಿರು ಬಣ್ಣದ ಟಿವಿಎಸ್ ಎಕ್ಸೆಲ್ ಹೆವಿ ಡ್ಯೂಟಿ ಆಗಿದ್ದು, ಅದಕ್ಕೆ ನೊಂದಣಿ ಸಂಖ್ಯೆ ಇರಲಿಲ್ಲ. ಅದರ ಚಸ್ಸಿ ನಂ. MD62BD68F1N96085 ಆಗಿತ್ತು. ನಂತರ ಸಿಕ್ಕ ಮುದ್ದೆಮಾಲನ್ನು ಪಂಚರ ಸಮಕ್ಷಮ ಇಲಾಖಾ ವಶಕ್ಕೆ ಪಡೆದು ಓ.ಸಿ. ವಿಸ್ಕಿ 90 ಎಂ.ಎಲ್.ನ 50 ಟೆಟ್ರಾಪಾಕೇಟ್‌ಗಳನ್ನು ಮತ್ತು ಕೆ.ಎಫ್. ಸ್ಟ್ರಾಂಗ್ ಬಿಯರ್‌ನ 20 ಟಿನ್‌ಗಳನ್ನು ನಿಯಮಾನುಸಾರ ಪಂಚನಾಮೆ ಜರುಗಿಸಿ ಅದಕ್ಕೆ ಅರಗು ಮತ್ತು ಸೀಲು ಹಚ್ಚಿ ಒಂದು ಬಿಳಿ ಬಟ್ಟೆಯಲ್ಲಿ ಕಟ್ಟಿ ರಟ್ಟಿನ ಪೆಟ್ಟಿಗೆಯಲ್ಲಿ ಹಾಕಿ ಪಂಚನಾಮೆಯನ್ನು 5.20 ರಿಂದ 6.30 ರವರೆಗೆ ಜರುಗಿಸಿದೆವು. ನಂತರ ಮುದ್ದೆಮಾಲು ಸಮೇತ ಠಾಣೆಗೆ ಬಂದು ಸರ್ಕಾರದ ತರಪಿ ಪಿರ್ಯಾದಿಯನ್ನು ದಾಖಲಿಸಿ ಪ್ರ.ವ.ವಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಕರಣದಲ್ಲಿ ಸಿಬ್ಬಂದಿಯವರಾದ ಚಾ.ಸಾ. 4 ರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿ ಶೋಧನಾ ಸಮುಚ್ಛಿತ ಪತ್ರ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ದಾಳಿ ಪಂಚನಾಮೆಯನ್ನು ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಮಾದರಿ ಮುದ್ದೆ ನಮೂನೆ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು. ಪಿರ್ಯಾದಿ ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ಪ್ರ.ವ.ವ. ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 5(ಎ) ಎಂದು ಗುರುತಿಸಲಾಯಿತು. ಮೇಲಾಧಿಕಾರಿಯವರಿಗೆ ದಿ: 28-11-2022 ರಂದು ಬರೆದ ಪತ್ರವನ್ನು ನಿ.ಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು. ಸ್ವತ್ತಿನ ಪಟ್ಟಿಯನ್ನು ಹಾಗೂ ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ನೋಡಿ

ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ. 1 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಎಸ್.ಎ. ವಕೀಲರಿಂದ**

ಬಾತ್ಮಿ ಬಂದಾಗ ನಾನು ಶ್ರೀಪುರಂಜಂಕ್ಷನ್‌ನಲ್ಲಿ ಗಸ್ತು ಕರ್ತವ್ಯದಲ್ಲಿದ್ದೆ. ಪ್ರಕರಣಕ್ಕೆ ಸಂಬಂಧಿಸಿದ ದಾಳಿಯ ಕುರಿತು ಠಾಣಾ ರೆಜಿಸ್ಟರ್‌ನಲ್ಲಿ ನಮೂದಿಸಿರುತ್ತೇವೆ. ನಾವು ಮೇಲಾಧಿಕಾರಿಯವರ ಆದೇಶದಂತೆ ಗಸ್ತು ಕರ್ತವ್ಯದಲ್ಲಿ ತೊಡಗಿರುತ್ತೇವೆ. ಘಟನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಆದೇಶವನ್ನು ಮೇಲಾಧಿಕಾರಿಯವರಿಂದ ಪಡೆದುಕೊಂಡಿಲ್ಲ. ನಮಗೆ ಬಾತ್ಮಿ ಬಂದ ನಂತರ ಚಾ.ಸಾ. 2 ಮತ್ತು 3 ರನ್ನು ಕರೆತಂದಿರುತ್ತೇವೆ. ಸದರಿ ಟಿವಿಎಸ್ ಎಕ್ಸೆಲ್ ವಾಹನ ಬೂದಿವಾಳ ಕ್ಯಾಂಪ್ ಕಡೆಯಿಂದ ಬರುತ್ತಿತ್ತು. ಸಾಸಲಮರಿಕ್ಯಾಂಪ್‌ನಿಂದ ಸಾಸಲಮರಿ ಗ್ರಾಮಕ್ಕೆ ಹೋಗುವಾಗ ಸಾಸಲಮರಿಕ್ರಾಸ್‌ನಲ್ಲಿ ಆರೋಪಿತನನ್ನು ನೋಡಿರುತ್ತೇವೆ. ಆರೋಪಿ ಸುಮಾರು 50 ಮೀ ದೂರದಿಂದ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ಆತನನ್ನು ನಾವು ಹಿಡಿಯಲು ಪ್ರಯತ್ನಿಸಿದೆವು. ಆರೋಪಿತನ ಕುರಿತು ವಿಚಾರಣೆ ಮಾಡಿಲ್ಲ ಎಂದರೆ ಆತ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆಂದು ನುಡಿಯುತ್ತಾರೆ. ಮು.ಮಾ. 1 ರಂತಹ ಮು.ಮಾ. ಗಳು ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಸಾಕ್ಷಿಗೆ ಮು.ಮಾ. ಗಳ ಪೈಕಿ ಓ.ಸಿ. ವಿಸ್ಕಿಯ ಟೆಟ್ರಾಪಾಕೇಟ್‌ಗಳ ಪೈಕಿ ಒಂದನ್ನು ತೆಗೆದು ತೋರಿಸಿ ಅದು ತೆರೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ರಾಸಾಯನಿಕ ಪರೀಕ್ಷೆಯಲ್ಲಿ, ಸಂಬಂಧಪಟ್ಟ ಎಫ್.ಎಸ್.ಎಲ್.ನವರು ಅದನ್ನು ತೆರೆದು ಅದರಿಂದ ಮಾದರಿ ತೆಗೆದು ಪರೀಕ್ಷಿಸಿದ್ದರಿಂದ ಅದು ತೆರೆಯಲಾಗಿದೆ ಎಂದು ನುಡಿಯುತ್ತಾರೆ. ಮು.ಮಾ. 1 ರಂತೆ ಮು.ಮಾ. ಗಳು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲಾಗಿದೆಯೇ ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಮು.ಮಾ. 1 ನ್ನು ಪ್ಯಾಕ್ ಮಾಡಿರುವ ಬಿಳಿ ಚೀಲದ ಮೇಲೆ ನಮ್ಮ ಸಹಿ ಇದೆ. ಆದರೆ ಅದನ್ನು ಪರೀಕ್ಷಿಸಿದವರ ಸಹಿ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ. 2 ಮತ್ತು 3 ರಿಗೆ ಮುಂಗಡ ನೋಟೀಸ್ ನೀಡಿಲ್ಲ. ಸದರಿಯವರು ಸಾಸಲಮರಿ ಗ್ರಾಮದವರಲ್ಲ ಎಂದರೆ ಸರಿ. ಸದರಿಯವರು ನಮ್ಮ ಇಲಾಖೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಆರೋಪಿ ತನ್ನ ವಾಹನವನ್ನು ಕೆಳಗೆ ಬೀಳಿಸಿ ಓಡಿ ಹೋದ. ನಿ.ಪಿ. 1 ನ್ನು ನಿ.ಪಿ. 2 ಕ್ಕೂ ಮೊದಲೇ ಸ್ಥಳದಲ್ಲಿಯೇ ಬರೆದಿರುತ್ತಾರೆ. ನಿ.ಪಿ. 1 ರಲ್ಲಿ ಆರೋಪಿತನ ವಾಹನದ ನೊಂದಣಿ ಸಂಖ್ಯೆ ಬರೆದಿಲ್ಲ ಎಂದರೆ ಸಾಕ್ಷಿ ನಿ.ಪಿ. 1 ನ್ನು ಶೋಧನೆ/ಪಂಚನಾಮೆ ಬರೆಯುವ ಪೂರ್ವದಲ್ಲಿ ಬರೆದಿದ್ದರಿಂದ ಬರೆದಿಲ್ಲ ಎಂದು ನುಡಿಯುತ್ತಾರೆ. ಗುನ್ನಾಸ್ಥಳ ಸಾರ್ವಜನಿಕ ಸ್ಥಳ ಅಲ್ಲ ಅದು ರಸ್ತೆಯಾಗಿತ್ತು. ಘಟನೆ ನಡೆಯಿತು ಎನ್ನಲಾದ

ದಿನ ನಾನು ಯಾವುದೇ ದಾಳಿ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿ ಮೋಟಾರ್ ಸೈಕಲ್ ಮೇಲೆ ಮುದ್ದೆಮಾಲನ್ನು ಇಟ್ಟುಕೊಂಡು ಹೋಗುತ್ತಿದ್ದ ನಮ್ಮನ್ನು ನೋಡಿ ವಾಹನ ಅಲ್ಲಿಯೇ ಬೀಳಿಸಿ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಬಿಟ್ಟು ಹೋದ ಮುದ್ದೆಮಾಲನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 1 ಮತ್ತು 2 ನ್ನು ಠಾಣೆಯಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆ ಹೆಚ್ಚಿಸಲು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ನ್ನು ಗುನ್ನಾಸ್ಥಳದಲ್ಲಿ ಜಪ್ತುಪಡಿಸಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)**

**ಓ. ಹೇ. ಕೇ. ಸರಿ ಇದೆ,**

**1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,**

**ಸಿಂಧನೂರು.**